ಎಂ.ವಿ.ಸಿ - 1053/2024
ಪಿ.ಡಬ್ಲ್ಯು - 01

**ದಿನಾಂಕ : 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಕಾಲಕ್ಕೆ ಅಪಘಾತಕ್ಕೆ ಒಳಪಟ್ಟ ವಾಹನ ನನ್ನ ಹೆಸರಿನಲ್ಲಿ ಇತ್ತು. ಅಪಘಾತದ ಸಮಯದಲ್ಲಿ ಕಾರನ್ನು ನಾನೇ ಚಾಲನೆ ಮಾಡುತಿದ್ದೆ. ನನಗೆ ವಾಹನ ಚಲಾಯಿಸಲು ನನ್ನ ಬಳಿ ಚಾಲನಾ ಪರವಾನಿಗೆ ಇತ್ತು. ಅದನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸುತ್ತೇನೆ. ಅಪಘಾತದ ಸ್ಥಳ ನೇರ ರಸ್ತೆ ಆಗಿರುತ್ತದೆ. ಅಪಘಾತದ ದಿನ ನಾನು ಉಚ್ಚಿಲದಿಂದ ಮಂಗಳೂರು ಕಡೆಗೆ ಹೋಗುತಿದ್ದೆ. ನನ್ನ ವಾಹನ ಅಪಘಾತದಿಂದ ಡ್ಯಾಮೇಜ್ ಆಗಿತ್ತು ಆದ್ದರಿಂದ ರಿಪೇರಿಗೆ ಇಟ್ಟಿದ್ದೇನೆ. ಯಾರ ನಿರ್ದೇಶನದ ಮೇರೆಗೆ ಗಾಡಿಯನ್ನು ರಿಪೇರಿ ಮಾಡಿಸುತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ವಾಹನ ಅಪಘಾತದಿಂದ ಡ್ಯಾಮೆಜ್ ಆಗಿತ್ತು ಆದ್ದರಿಂದ ರಿಪೇರಿಗೆ ಇಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ಅಪಘಾತದ ಸ್ಥಳಕ್ಕೆ ವಾಹನವನ್ನು ಪರೀಶಿಲಿಸಲು ಸರ್ವೇಯರ್ ರವರು ಬಂದಿದ್ದರು . ಸರ್ವೇಯರ್ ರವರು 2 ರಿಂದ 3 ಬಾರಿ ಬಂದಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಇದ್ದೆ ಸರ್ವೇಯರ್ ಬಂದು ಸರ್ವೆ ಮಾಡಿರುತ್ತಾರೆ ಎಂದು ನನ್ನ ಭಾವ ತಿಳಿಸಿರುತಾರೆ. ಅಪಘಾತದ ಸಮಯದಲ್ಲಿ ನನ್ನ ವಾಹನಕ್ಕೂ ಕೂಡ ಇನ್ಸುರೆನ್ಸ್ ಇತ್ತು ಆದರೇ ಅದು 3rd party insurance ಆಗಿತ್ತು. ಮತ್ತೊಂದು ವಾಹನ ಎದುರು ದಿಕ್ಕಿನಿಂದ ಬಂದು ನಮ್ಮ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ . ನನ್ನ ವಾಹನ ಸಂಪೂರ್ಣ ನುಜ್ಜು ಗುಜ್ಜು ಆಗಿರುತದೆ, ಆದ್ದರಿಂದ ಈಗಲೂ ಕೂಡ ರಿಪೇರಿ

ಆಗುತ್ತಿದೆ. ನಾನು scrap ಗೆ ಹಾಕಿಲ್ಲ, ಅದನ್ನು ಈಗಲೂ ಕೂಡ ಗ್ಯಾರೇಜ್ ನಲ್ಲಿ ಇಟ್ಟಿರುತ್ತೇನೆ . ಸದ್ರಿ ವಾಹನವನ್ನು ಉಪಯೋಗಿಸುತಿಲ್ಲ ಎನ್ನುವ ಬಗ್ಗೆ ದಾಖಲೆ ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗ್ಯಾರೇಜ್ ನಲ್ಲಿ ಇದೆ ಅದಕ್ಕೆ ಏನು ದಾಖಲೆ ಕೊಡುವುದು ಎಂದು ತಿಳಿಸಿರುತಾರೆ. ಅಪಘಾತಕ್ಕೆ ಒಳಪಟ್ಟ ಒಂದೇ ವಾಹನ ನನ್ನ ಹೆಸರಿನಲ್ಲಿ ಇದೆ. ಅಪಘಾತದಿಂದ ನನ್ನ ವಾಹನಕ್ಕೆ ಡ್ಯಾಮೇಜ್ ಮತ್ತು ನಷ್ಟ ಸಂಭವಿಸಿಲ್ಲ ಎಂದರೆ ಸರಿಯಲ್ಲ. ವಾಹನ ರಿಪೇರಿಗಾಗಿ ಮತ್ತು ನನ್ನ ಒಡಾಟಕ್ಕೆ ಯಾವುದೇ ಹಣ ಖರ್ಚಾಗಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸರ್ವೆ ವರದಿಯನ್ನು ಹಾಜುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 13 ಮತ್ತು 14 ನ್ನು ಸೃಷ್ಟಿಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾಹನ ದ ಅಪಘಾತ ನನ್ನ ನಿರ್ಲಕ್ಷತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ನಿಗದಿತ ಸಮಯದಲ್ಲಿ ಸಲ್ಲಿಸದೇ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.